(ಗೊಂದಲ)

ಶ್ರೀ ವಸಂತ ಎ. ಸಾಲಿಯಾನ :- ಏನು ವಿಷಯ ಇದೆ, ಅದಕ್ಕೆ ನಾನು ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಇದು ಬೇರೆ ವಿಷಯ ಇದ್ದರೆ, ಬೇರೆ ರೀತಿಯಿಂದ ಅವರು ತೆಗೆದುಕೊಂಡು ಬರಲಿ, ನಾನು ಉತ್ತರ ಕೊಡುತ್ತೇನೆ.

ಶ್ರೀಮತಿ ಕೆ.ಎ. ಅನುಸೂಯಮ್ಮ :- ಉಪಾಧ್ಯಕ್ಷರೆ, ನಾನು ತರಬೇತಿ ಕೇಂದ್ರದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು :- ನೀವು ಹೇಳಿದ ವಿಷಯವನ್ನೇ ಅವರೂ ಹೇಳುತ್ತಿದ್ದಾರೆ.

ಶ್ರೀ ವಸಂತ ಎ. ಸಾಲಿಯಾನ :- ಇಲ್ಲ, ಉಪಾಧ್ಯಕ್ಷರೆ ಇದು ಡೈವರ್ಟ್ ಆಗುತ್ತಿದೆ. ಆ ವಿಷಯ ಮುಗಿದುಹೋಗಿದೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ :- ಇದು ಗಮನ ಸೆಳೆಯುವ ಸೂಚನೆ ಇಲ್ಲಿ ನಡೆಯುತ್ತಿರುವುದು. ಇದು ನನಗೆ ಅರ್ಥವಾಗುತ್ತಿಲ್ಲ. ಇದು ಚರ್ಚೆ ಮಾಡುವುದಿದ್ದರೆ ನಾವೂ ಕೂಡ ಚರ್ಚೆ ಮಾಡುತ್ತೇವೆ. ಇದರ ಬಗ್ಗೆ ನಮಗೂ ಕೂಡ ಗೊತ್ತಿದೆ. ನಮಗೂ ಅವಕಾಶ ಕೂಡಿ, ಬೇಕಾದರೆ ಚರ್ಚೆ ಮಾಡೋಣ.

ಉಪಾಧ್ಯಕ್ಷರು :- ಈಗ ಗಮನ ಸೆಳೆಯುವ ಸೂಚನೆಯನ್ನು ಅವರು ಕೊಟ್ಟಿದ್ದಾರೆ. ಅದರ ಬಗ್ಗೆ ಕೇಳಿದ್ದಾರೆ. ಉತ್ತರ ಕೊಟ್ಟಿದ್ದಾರೆ. ಮತ್ತೆ ಏನು ಕ್ಲಾರಿಫಿಕೇಶನ್ ?

ಶ್ರೀ ಯು.ಆರ್. ಸಭಾಪತಿ :- ನಿಯಮಾವಳಿ ಪ್ರಕಾರ ಅದರ ಬಗ್ಗೆ ಬೇರೆ ನೋಟೀಸ್ ಕೊಡಲಿ. ಆಮೇಲೆ ಮಾತನಾಡೋಣ. ಬೇಕಾದಷ್ಟು ಚರ್ಚೆ ಮಾಡಲಿಕ್ಕೆ ಇದೆ. ಇಷ್ಟು ಜನ ಮೀನುಗಾರರ ಬಗ್ಗೆ ಮಾತನಾಡುತ್ತಾರೆಂದು ಬಹಳ ಸಂತೋಷವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಉಪಾಧ್ಯಕ್ಷರೆ, ಸದನ ನಾಳೆ ನಾಡಿದ್ದು ಆಡ್ಜರ್ನ್ ಆಗುತ್ತದೆ. ಬಯಲು ಸೀಮೆ ಪ್ರದೇಶದಲ್ಲಿ ಮೀನುಗಾರರು ಇದ್ದಾರೆ. ಅವರಿಗೆ ಏನೇನು ಮಾಡಿದ್ದೀರಿ ಎನ್ನುವುದನ್ನೂ ಸಹ ಹೇಳ ಬೇಕಾಗುತ್ತದೆ.

ಉಪಾಧ್ಯಕ್ಷರು :- ಈಗ ವಿಷಯಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೀವು ಮುಂದೆ ಡಿಮ್ಯಾಂಡ್ಸ್ ಬಂದಾಗ ಮಾತನಾಡಿ.

ಶ್ರೀ ವಿಜಯಕುಮಾರ್ ಶೆಟ್ಟಿ :- ಮಾನ್ಯ ಉಪಾಧ್ಯಕ್ಷರೆ, ಎಕ್ಸೈಜ್ ಡ್ಯೂಟಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಲಿಲ್ಲ. ಆ ಬಗ್ಗೆ ಹೇಳಬೇಕು. ಕೇಂದ್ರ ಸರ್ಕಾರ ಏನು ಮಾಡಿದ್ದಾರೆ ಅಂತ ಹೇಳಲಿ.

ಉಪಾಧ್ಯಕ್ಷರು :- ಈಗ ಈ ವಿಷಯ ಮುಗಿಯಿತು. ಈಗ ಮಾನ್ಯ ಸದಸ್ಯರಾದ ಯು.ಟಿ. ಫರೀದ್ ಅವರ ವಿಷಯ ಇದೆ. ಅದು ಏನೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕಡಲ ಕೊರೆತದ ಬಗ್ಗೆ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಗಮನ ಸೆಳೆಯುವುದು.

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ಕಡಲ ಕೊರೆತದ ಬಗ್ಗೆ

ಶ್ರೀ ಯು.ಟಿ. ಫರೀದ್ (ಉಳ್ಳಾಲ) :- ಮಾನ್ಯ ಉಪಾಧ್ಯಕ್ಷರೆ, I call the attention of the concerned minister about serious & sea erosion at ullal and difficulties faced by the Rustic at ullal

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಚೆನ್ನಾಗಿ ಕನ್ನಡ ಬರುತ್ತದೆ. ಅವರು ಕನ್ನಡದಲ್ಲಿ ಮಾತನಾಡಲಿ.

ಶ್ರೀ ಎನ್. ಯೋಗೀಶ್ ಭಟ್ :- ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಕ್ಷಮಿಸಿ. ಮಾನ್ಯ ಸದಸ್ಯರು ಇಂಗ್ಲಿಷ್‌ನಲ್ಲಿ ಹೇಳುವುದಕ್ಕೆ ಅರ್ಥವಿದೆ. ನಾವು ಕನ್ನಡದಲ್ಲಿ ಹೇಳಿ ಹೇಳಿ ಸಾಕಾಯಿತು. ಕಡಲಕೊರೆತದ ಬಗ್ಗೆ ಸ್ಪಂದಿಸಿಲ್ಲ. ಅದಕೋಸ್ಕರ ಅವರು ಉದ್ದೇಶಪೂರ್ವಕವಾಗಿ ಇಂಗ್ಲಿಷ್‌ನಲ್ಲಿ ಹೇಳುತ್ತಿದ್ದಾರೆ.

ಶ್ರೀ ವಸಂತ ಏ. ಸಾಲಿಯಾನ (ಏನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಯು.ಟಿ. ಫರೀದ್‌ರವರು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕಡಲಕೊರೆತದ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಉತ್ತರ ಹೀಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ಕಡಲ ಕೊರೆತದ ತೀವ್ರತೆ ಹಾಗೂ ಅದರಿಂದ ಕರಾವಳಿ ತೀರ ಪ್ರದೇಶದ ಜನರ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆ. ಪ್ರಕೃತಿ ವಿಕೋಪದಿಂದ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಸಾಕಷ್ಟು ಕ್ರಮಗಳನ್ನು ಕೈಗೊಂಡಿರುತ್ತದೆ. ಉಳ್ಳಾಲದ ಬಳಿಯ ಕಡಲ ಕೊರೆತವು ತೀವ್ರತರವಾಗಿರುವುದರಿಂದ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಇದಕ್ಕಾಗಿ ಸೂಕ್ತ ತಂತ್ರಜ್ಞಾನವನ್ನು ಅಳವಡಿಸಿ ಪರಿಹಾರ ಕ್ರಮಗಳನ್ನು ಮಾಡಿಸಲಾಗುತ್ತಿದೆ.

'ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣಾ ಯೋಜನೆ' (National Coastal Protection Project) ಅಡಿ ಕೇಂದ್ರ ಸರ್ಕಾರದ ನೆರವು ಪಡೆಯಲು ಸಲ್ಲಿಸಿರುವ 5 ಯೋಜನೆಗಳಲ್ಲಿ ಉಳ್ಳಾಲದ 4,216 ಕೋಟಿ ರೂ.ಗಳ ಪ್ರಸ್ತಾವನೆಯೂ ಸೇರಿದೆ. ಈ ವರ್ಷ ಮಳೆಗಾಲದಲ್ಲಿ ಸಂಭವಿಸಿದ ತೀವ್ರ ಸಮುದ್ರ ಕೊರೆತವನ್ನು ಮರಳು ಚೀಲಗಳಿಂದ ಬಂಡಿಂಗ್ ಮತ್ತು ಕಲ್ಲಿನ ಗೋಡೆಗಳನ್ನು ನಿರ್ಮಿಸಿ, ತಾತ್ಕಾಲಿಕವಾಗಿ ತಡೆಗಟ್ಟಲಾಗಿದೆ.

ಈ ಮಧ್ಯ ಫ್ರಾನ್ಸ್ ಸರ್ಕಾರದ ಸಹಯೋಗ ಹಾಗೂ ಸಹಾಯಧನದೊಂದಿಗೆ ಫ್ರಾನ್ಸ್ ದೇಶದ 'ಸ್ಟೆಬಪ್ಲೇಜ್' ತಂತ್ರಜ್ಞಾನವನ್ನು ಅಳವಡಿಸಿ, ಪ್ರಾಯೋಗಿಕವಾಗಿ ಸುಮಾರು ಒಂದೂವರೆ ಕಿಲೋ ಮೀಟರ್ ಉದ್ದದ ಕರಾವಳಿಯನ್ನು ಸಂರಕ್ಷಿಸಲು ಯೋಜನೆಯನ್ನು ತಯಾರಿಸಿದ್ದು ಅದರ ಅನುಷ್ಠಾನಕ್ಕಾಗಿ ಮಂಡಿಸಲಾಗುತ್ತಿದೆ.

ಶ್ರೀ ಯು.ಟಿ. ಫರೀದ್ :- ಮಾನ್ಯ ಉಪಾಧ್ಯಕ್ಷರೆ, ಇದು ಇವತ್ತು ನಿನ್ನೆಯಿಂದ ಶುರುವಾದ ಸಮಸ್ಯೆಯಲ್ಲ. 15 ವರ್ಷಗಳಿಂದ ಇದೇ ರೀತಿಯಲ್ಲಿ ಈ ಸಮಸ್ಯೆ ಬರುತ್ತದೆ. ಮಳೆಗಾಲದಲ್ಲಿ ಕೆಲವರು ಎದ್ದು ಹೋಗುತ್ತಾರೆ, ಇನ್ನು ಕೆಲವರಿಗೆ ಮನೆ ಮಠ ಇಲ್ಲದಂತೆ ಆಗುತ್ತದೆ. ಇದು ಪ್ರತಿ ವರ್ಷವೂ ಆಗುವಂತಹ ಒಂದು ದೊಡ್ಡ ಸಮಸ್ಯೆ. ಕಳೆದ ಸಲ ಕೂಡ ಇದೇ ಸದನದಲ್ಲಿ ಆಗಿನ ಮಾನ್ಯ ಮಂತ್ರಿಗಳು ಇದೇ ರೀತಿಯ ಉತ್ತರ ನೀಡಿದರು. ಮಂತ್ರಿಗಳ ಖಾತೆ ಬದಲಾವಣೆಯಾಗುತ್ತದೆ, ಪರಿಹಾರ ಏನೂ ಇಲ್ಲ. ಹಿಂದಿನ ಮಂತ್ರಿಗಳು ಹೇಳಿದ್ದರು ನಾವು ಡಿಸೆಂಬರ್ ಒಳಗೆ ಇದನ್ನು ಮಾಡಿಯೇ ಕೊಡುತ್ತೇವೆಂದು, ಈ ಡಿಸೆಂಬರ್ ವೇಳೆಗೆ

ಅವರು ಹೋದರು ಇವರು ಬಂದರು. ಇವರು ಬಂದಾಗ ಇವರೂ ಕೂಡ ಹೇಳುವುದು ಅದೇ ಹಳೆಯ ಕಥೆ. ಫ್ರಾನ್ಸ್ ಜೊತೆ ಏನು ಟೆಕ್ನಿಕಲ್ ಒಪ್ಪಂದ ಮಾಡಿಕೊಂಡಿದ್ದಾರೋ ಅದು ನನಗೆ ಗೊತ್ತಿಲ್ಲ. ನಮಗೆ ಇಂಡಿಯನ್ ಟೆಕ್ನಿಕಲ್ ಬಹಳ ಚೆನ್ನಾಗಿದೆ ಅಷ್ಟೇ ಸಾಕಿತ್ತು. ಅವರು ಫ್ರಾನ್ಸ್‌ನಿಂದಲೋ ಮತ್ತೆಲ್ಲಿಂದಲೋ ಟೆಕ್ನಾಲಜಿಯನ್ನು ತರಿಸಿಕೊಂಡು ಇನ್ನೂ ಒಂದು ವರ್ಷ ಮುಂದಕ್ಕೆ ಹಾಕಿದರೆ ಈ ಮಳೆಗಾಲದಲ್ಲಿ ಬರುವ ಎಲ್ಲಾ ಕಷ್ಟನಷ್ಟಗಳಿಗೆ ತಾವು ಉತ್ತರವನ್ನು ಕೊಡಬೇಕು. ಏಕೆಂದರೆ ನೀವು ಫ್ರಾನ್ಸ್‌ಗೆ ಹೋಗಿ ಮಾಡುವುದೇಕೆ ? ಈ ಕಣ್ಣಾನೂರಿನಿಂದ ಕ್ಯಾಲ್‌ಕಟ್‌ವರೆಗೆ ಸೈಡ್‌ಗೋಡೆ ಕಟ್ಟಿದ್ದಾರೆ. ರಿವೀಟ್‌ಮೆಂಟ್ ಕಟ್ಟಿದ್ದಾರೆ ಅದು ಇದುವರೆಗೂ ಏನೂ ಹಾಳಾಗಲಿಲ್ಲ. ಅದು ಏಕೆ ಹಾಳಾಗಲಿಲ್ಲ ? ಈ ರೀತಿ ಮಾಡುವುದಿಲ್ಲ ಕೇವಲ ಇವರು ಸಮುದ್ರಕ್ಕೆ ಕಲ್ಲು ಹಾಕುವುದು. ಆ ಸಮುದ್ರದ ಕಲ್ಲು ಕೇವಲ ಎರಡು ತಿಂಗಳಲ್ಲಿ ನೀರಿಗೆ ಹೋಗುತ್ತದೆ. ಮತ್ತೆ ಪುನಃ ಕಲ್ಲು ಹಾಕುವುದು, ಪುನಃ ಅದೂ ನೀರಿಗೆ ಹೋಗುತ್ತದೆ. ಈ ರೀತಿ ಸರ್ಕಾರದ ಹಣ ಕೋಟಿಗಟ್ಟಲೆ ಹೋಗಿದ್ದೂ ಅಲ್ಲದೆ ಯಾವ ಪ್ರಯೋಜನವೂ ಇದುವರೆಗೂ ಆಗಲಿಲ್ಲ. ಆದಕಾರಣ ನೀವು ಸರಿಯಾದ ಭರವಸೆಯನ್ನು ಕೊಟ್ಟರೆ ಮಾತ್ರ ಅನುಕೂಲ. ಇಲ್ಲದಿದ್ದರೆ ಈ ಸಲದ ಮಳೆಗಾಲದಲ್ಲಿ ಆಗುವ ಅನ್ಯಾಯಕ್ಕೆ ನೀವು ಕಾರಣೀಭೂತರಾಗಬೇಕೆಂದು ಹೇಳಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಉಪಾಧ್ಯಕ್ಷರೆ, ಉಳ್ಳಾಲ ಪ್ರದೇಶದ ಸಮುದ್ರ ಕೊರತೆದ ತಡೆಗೋಡೆ ಮಾಡಲಿಕ್ಕೆ 1988 ರಿಂದ ಇಲ್ಲಿಯವರೆಗೆ 2003 ರವರೆಗೆ ಸರ್ಕಾರ 246.53 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ಈಗಾಗಲೇ ಮುಗಿಸಿದ್ದೇವೆ. ಆದರೆ ಅದು ಟೆಂಪರರಿ ಕಾಮಗಾರಿ. ಆದರೆ ಇವತ್ತು ಉಳ್ಳಾಲ ಪ್ರದೇಶದ ಒಂದೂವರೆ ಕಿಲೋಮೀಟರ್‌ವರೆಗೂ ಪೂರ್ಣಪ್ರಮಾಣದ ಕಾಮಗಾರಿಯನ್ನು ಫ್ರೆಂಚ್ ಸರ್ಕಾರದ ವತಿಯಿಂದ ಮೂರನೇ ಒಂದು ಭಾಗದಷ್ಟು ಫ್ರೆಂಚ್ ಸರ್ಕಾರ, ಮೂರನೇ ಎರಡರಷ್ಟು ಹಣ ಕರ್ನಾಟಕ ಸರ್ಕಾರ ಖರ್ಚು ಮಾಡಲು ಒಪ್ಪಂದ ಸಹ ಇವತ್ತು ಆಗಿದೆ. ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚೆ ಈ ಕಾಮಗಾರಿಯನ್ನು ಪ್ರಾರಂಭ ಮಾಡಲಿಕ್ಕೆ ನಾವು ಸರ್ವ ರೀತಿಯ ಪ್ರಯತ್ನವನ್ನು ಮಾಡುತ್ತೇವೆ. ಆದ್ದರಿಂದ ಈ ವರ್ಷ ಉಳ್ಳಾಲ ಪ್ರದೇಶದಲ್ಲಿ ಸಮುದ್ರದ ಕೊರೆತ ಹೆಚ್ಚಿಗೆ ಆಗದ ರೀತಿಯಲ್ಲಿ ಈ ತಡೆಗೋಡೆ ಕಾಮಗಾರಿಯನ್ನು ಒಂದೂವರೆ ಕಿಲೋಮೀಟರ್‌ವರೆಗೂ ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಉಪಾಧ್ಯಕ್ಷರೆ, ಈ ತಡೆಗೋಡೆ ವ್ಯವಹಾರದಲ್ಲಿ 13 ಕೋಟಿ ಒಂದು ಅವ್ಯವಹಾರ ಆಗಿತ್ತಲ್ಲಾ ಕಳೆದ ವರ್ಷ ಅಥವಾ ಅದಕ್ಕಿಂತ ಹಿಂದಿನ ವರ್ಷ ಅದು ಯಾವ ಹಂತದಲ್ಲಿದೆ ?

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ವಿಜಯಕುಮಾರ ಶೆಟ್ಟಿ :- ಮಾನ್ಯ ಉಪಾಧ್ಯಕ್ಷರೆ, ಕಳೆದ ಸಲ ಏನು ಮರಳು ದಿಣ್ಣೆ ಹಾಕುತ್ತಿದ್ದಾರೆ ಅದು ನಿಜವಾಗಲೂ ಸರಿಯಾದ ಕ್ರಮ ಅಲ್ಲ. ಸುಮ್ಮನೆ ಅರ್ಧಂಬರ್ಧ ಅನುಭವ ಇದ್ದವರು ಅದನ್ನು ಮಾಡಿರಬೇಕು. ಮರಳು ದಿಣ್ಣೆಗಳನ್ನು ಸಮುದ್ರದ ಕೊರೆತಕ್ಕೆ ಹಾಕಿದರೆ ಅದು ಎಲ್ಲಿ ನಿಲ್ಲುತ್ತದೆ ? ಈಗ ಹೊಸದಾಗಿ ಸ್ಪೆಬಿ ಪ್ಲೇಜ್ ಅಂತ ಹೇಳಿ ಹೊಸ

ಟೆಕ್ನಾಲಜಿಯನ್ನು ಫ್ರಾನ್ಸ್ ದೇಶದ ಮುಖಾಂತರ ಮಾಡುತ್ತಿದ್ದಾರೆ. ಅವರು ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಪರಿಶೀಲನೆ ಮಾಡಿ ಎರಡು ವರ್ಷ ಆಗುತ್ತಿದೆ. ನಮ್ಮ ಇಲಾಖೆ ವತಿಯಿಂದ ಇದು ಬಹಳ ಲೇಟ್ ಆಗುತ್ತಿದೆ. ಇದನ್ನು ಮುಂದಿನ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮೊದಲು ಪ್ರಾರಂಭ ಮಾಡಿದರೆ ಒಳ್ಳೆಯದು. ಅನೇಕ ದೇಶಗಳಲ್ಲಿ ಇದನ್ನು ಟ್ರಯಲ್ ಮಾಡಿ ಅತ್ಯಂತ ಒಳ್ಳೆಯ ರೀತಿಯಲ್ಲಿ ಸಕ್ಸ್‌ಸ್‌ಫುಲ್ ಮಾಡಿದ್ದಾರೆ. ಪ್ರಪಂಚದಲ್ಲಿ ಸಿಕ್ಕುವಂತಹ ಎಲ್ಲಾ ತಡೆಗೋಡೆಗಳ ವ್ಯವಸ್ಥೆಯಲ್ಲಿ ಇದು ಅತ್ಯಂತ ಸಕ್ಸ್‌ಸ್‌ಫುಲ್ ಎನ್ನುವ ಒಂದು ಸರ್ಟಿಫಿಕೇಟನ್ನು ಪ್ರಪಂಚದಾದ್ಯಂತ ಪಡೆದುಕೊಂಡಿದ್ದು ಆಗಿದೆ. ಆದ್ದರಿಂದ ಇದಕ್ಕೆ ತಾವು ಒಂದು ಟೈಂ ಬೌಂಡ್ ಪ್ರೋಗ್ರಾಂ ಹಾಕಬೇಕು. ಈಗಾಗಲೇ ಒಂದೂವರೆ ವರ್ಷ ಆಯಿತು. ಫ್ರಾನ್ಸ್‌ನಿಂದ ಜನ ಬಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ವಿವರಿಸಿದ್ದಾರೆ. ಒಂದೂವರೆ ವರ್ಷಕ್ಕೆ ಮೇಲಾಯಿತು. ಏಕೆ ಇಷ್ಟು ಡಿಲೇ ಆಗುತ್ತಿದೆ ? ಮಾನ್ಯ ಮಂತ್ರಿಗಳು ಇದನ್ನು ದಯವಿಟ್ಟು ಸ್ವಲ್ಪ ಸೀರಿಯಸ್‌ಆಗಿ ಮಾಡಿ. ಈಗಾಗಲೇ ತಮ್ಮ ಇಲಾಖೆಯಿಂದ ಇಬ್ಬರು ಅಧಿಕಾರಿಗಳು ತಾವು ಫ್ರಾನ್ಸ್‌ಗೆ ಹೋಗಬೇಕೆಂದು ತೀರ್ಮಾನವಾಗಿದೆ. ನೀವು ಏಕೆ ಹೋಗುತ್ತಿಲ್ಲ ? ಫ್ರಾನ್ಸ್‌ಗೆ ಹೋಗಿ ಅದನ್ನು ನೋಡಿಕೊಂಡು ಬಂದು ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮೊದಲು ಅದನ್ನು ಪ್ರಾರಂಭ ಮಾಡಿ. ಫ್ರಾನ್ಸ್ ಸರ್ಕಾರ ಮೂರನೇ ಒಂದು ಭಾಗದ ಗ್ರಾಂಟ್ ಕೊಡಲಿಕ್ಕೂ ಒಪ್ಪಿದೆ.

ಶ್ರೀ ಯು.ಟಿ. ಫರೀದ್ :- ಮಾನ್ಯ ಉಪಾಧ್ಯಕ್ಷರೆ, 15 ವರ್ಷದೊಳಗೆ ಯಾವುದೇ ಒಂದು ಸಮುದ್ರ ಕೊರೆತ ತಡೆಯುವ ಕೆಲಸ ಆಗಲಿಲ್ಲ. ಸರ್ಕಾರದ ದುಡ್ಡು ಅನಾವಶ್ಯಕವಾಗಿ ವೇಸ್ಟ್ ಆಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಜನರು ಮಳೆಗಾಲ ಬರುವಾಗ ಅಲ್ಲಲ್ಲಿ ಕುಳಿತುಕೊಂಡು ಬೇರೆ ಬೇರೆ ಕಡೆಗಳಿಗೆ ಎದ್ದು ಹೋಗುತ್ತಾರೆ. ಅಲ್ಲಿ ತಂದು ಕಲ್ಲು ಹಾಕುತ್ತಾರೆ. ಈ ಕಲ್ಲು ನೀರಿಗೆ ಹೋಗುತ್ತದೆ. ಆಗ ಹಣ ವೇಸ್ಟ್ ಆಯಿತು. ಈ 15 ವರ್ಷ ಇವರು ಮಾಡಿದ ಕೆಲಸ ಇದೆ. ಈಗ ನೀವು ಈ ಅಸೆಂಬ್ಲಿಯಲ್ಲಿ ಮಾತು ಕೊಡಬೇಕು. ನಮಗೆ ಜೂನ್‌ಗೆ ಮೊದಲು ಮೇ ತಿಂಗಳಲ್ಲಿ ಅದಕ್ಕೆ ಪ್ರತ್ಯೇಕವಾದ ಕಾರ್ಯಕ್ರಮವನ್ನು ತೆಗೆದುಕೊಂಡು ನಾವು ಮಾಡುತ್ತೇವೆಂದು ಹೇಳಿ. ಇಲ್ಲದಿದ್ದರೆ ನಿಮ್ಮ ಮುಂದೆ ಜನ, ನಿಮ್ಮ ಮೊನುಗಾರ ಜನರೇ ಅ[illegible]ವುದು, ನಿಮ್ಮ ಜನ ನಿಮ್ಮಲ್ಲಿ ಬರುತ್ತಾರೆ, ನನ್ನಲ್ಲಿ ಬರುವುದಿಲ್ಲ. ಆ ಒಂದು ಮಾತನ್ನು ಪ[illegible]ಸ ತಾವು ಜಾಗ್ರತೆಯಾಗಿ ಇಟ್ಟುಕೊಳ್ಳಿ. ಆದಕಾರಣ ಇದು ಸುಲಭದ ಮಾತು ಅಂತ ಹೇಳುವುದು ಬೇಡ. 15 ವರ್ಷ ಮಾತನಾಡಿ, ಮಾತನಾಡಿ ಆಗಿದೆ. ಕಳೆದ ವರ್ಷ ಆಗಲಿಲ್ಲ, ಅದರ ಹಿಂದಿನ ವರ್ಷ ಯಾವುದೋ ಒಂದು ಗುಡ್ಡೆಯಲ್ಲಿ 20 ಮನೆ, 30 ಮನೆಗಳನ್ನು ಕಟ್ಟಿಕೊಟ್ಟರು. ಅಲ್ಲಿ ಯಾರೂ ನಿಲ್ಲುವುದಿಲ್ಲ. ಅದರ ಮೊದಲಿನ ವರ್ಷ ಮಾಡಿದರು. ಇನ್ನೊಂದು ಕಡೆಯಲ್ಲಿ ಕೊಟ್ಟರು. ಅವರಿಗೆ ಬೇರೆ 20 ಮನೆಗಳನ್ನು ಕೊಟ್ಟರು. ಆದರೆ, ವರ್ಷಂಪ್ರತಿ ಈ ರೀತಿ ಮನೆ ಕಟ್ಟುವುದು, ಅವರು ಮತ್ತೆ ಎಲ್ಲೆಲ್ಲಿಯೋ ಹೋಗುವುದು ಅವರಿಗೆ ಕೆಲಸವೂ ಸಿಕ್ಕುವುದಿಲ್ಲ, ಅವರು ಸಮುದ್ರದ ಬದಿಯಲ್ಲಿರುವುದು ಈ ರೀತಿಯಲ್ಲಿ ಅನ್ಯಾಯವಾಗುವುದನ್ನು 15 ವರ್ಷ ನೋಡಿ, ನೋಡಿ ಈ ಸರ್ಕಾರ ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಎನ್. ಯೋಗೀಶ್ ಭಟ್ :- ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದ ಪ್ರತಿಷ್ಠಿತವಾದಂಥ ಕೆ.ಆರ್.ಐ.ಸಿ ಇದೆ, ಈಗ ಎನ್‌ಐಟಿಟಿ ಎಂದು ಗುರುತಿಸಲ್ಪಟ್ಟ ಒಂದು ಸಂಸ್ಥೆ. ದಕ್ಷಿಣ ಭಾರತ ಮಟ್ಟದ ತಜ್ಞರನ್ನು ಕರೆಸಿ ಅದಕ್ಕೆ ಸಂಬಂಧಪಟ್ಟ ಸಮಗ್ರವಾದ ಒಂದು

ವಾರದ ಸಮ್ಮೇಳನವನ್ನು ಮಾಡಿ, ಸಮಾರೋಪಕ್ಕೆ ಸನ್ಮಾನ್ಯ ಸಚಿವರನ್ನು ಕರೆದಿದ್ದರು. ಇಂಥಿಂಥ ಟೆಕ್ನಾಲಜಿಯನ್ನು ನಾವು ಇವಾಲ್ವ್ ಮಾಡಿ ಕೊಂಡಿದ್ದೇವೆ, ಅದರಲ್ಲಿ ಫ್ಲೋಟಿಂಗ್ ಟೆಕ್ನಾಲಜಿ ಮತ್ತಿತರ ಬೇರೆ ಬೇರೆ ಟೆಕ್ನಾಲಜಿಯನ್ನು ಉಪಯೋಗ ಮಾಡಿಕೊಂಡು, ಹೇಗೆ ಇದನ್ನು ತಡೆಗಟ್ಟಬಹುದೆಂದು ಯೋಚನೆ ಮಾಡಲಾಗಿದೆ. ಬಹುಶಃ, ಅದಕ್ಕೆ ಈಗ ನಮಗೆ ಸಮಯ ಇಲ್ಲ. ನಾವು ಫ್ರಾನ್ಸ್‌ಗೆ ಹೋಗಿ, ಫ್ರೆಂಚ್‌ನವರನ್ನು ಕರೆಸಲಿಕ್ಕೆ ಯೋಚನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಇದು ಎಷ್ಟು ಹಾಸ್ಯಾಸ್ಪದವೋ ನನಗೆ ಗೊತ್ತಿಲ್ಲ. ಬೇರೆ ಬೇರೆ ಸಂದರ್ಭ ನಾನು ಉಲ್ಲೇಖ ಮಾಡಿದ್ದೇನೆ. 3 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮಾಡಿ, ಅದು ಎರಡು ವರ್ಷಗಳಲ್ಲಿ ಇಲ್ಲ. ಅದರ ನಂತರ 13 ಕೋಟಿ ರೂ.ನ ಹೊಸ ಕಾಮಗಾರಿಗೆ ಸಂಬಂಧಪಟ್ಟ ಪ್ರಸ್ತಾವನೆ. ಈ ರೀತಿಯಲ್ಲಿ ಈ ಕಾಮಗಾರಿಯಲ್ಲಿ ಮಾಡಿದಂಥ ಅವ್ಯವಹಾರ ಮತ್ತು ಮೋಸ ಬೇರೆ ಯಾವುದೇ ಕಾಮಗಾರಿಯಲ್ಲಿ ಆಗಿಲ್ಲ. ಈ ಹಿನ್ನೆತಿಯಲ್ಲಿ ಕನಿಷ್ಟ, ಇನ್ನು ಮುಂದಕ್ಕೆ ಮಾಡುವಂಥ ಕಾಮಗಾರಿಗಳಲ್ಲಿ ಅತ್ಯಂತ ಕಟ್ಟುನಿಟ್ಟಿನ ಎಚ್ಚರವನ್ನು ವಹಿಸಬೇಕು. ಪಾರದರ್ಶಕತೆ ಬರುವಂಥ ನಿಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ಎಂದರೆ ಏನು ? ನಾವು ನೋಡಿದ್ದೇವೆ, ಇದರ ಬಗ್ಗೆ ತಾಸುಗಟ್ಟಲೆ ಚರ್ಚೆ ಅಲ್ಲ. ಗಮನ ಸೆಳೆಯಬೇಕು, ಅದಕ್ಕೆ ಮಂತ್ರಿಗಳು ಉತ್ತರ ಕೊಡುವುದು. ಅಷ್ಟೇ ಇರುವುದು. ಒಂದೋ ಎರಡೋ ಪ್ರಶ್ನೆ ಕೇಳಬೇಕು. ಇದು ತಾಸುಗಟ್ಟಲೆ ಆಯಿತು. ಕಾಯಿದೆ ಓದುವವರು ನೀವೂ ಕೂಡ ವಿಳಂಬ ಮಾಡುತ್ತಾ ಇದ್ದೀರಿ. ಇದಕ್ಕೆ ತಾಸುಗಟ್ಟಲೆ ಅವಶ್ಯವಿಲ್ಲ. ಮಾನ್ಯ ಉಪಾಧ್ಯಕ್ಷರೇ, ಇದರ ಬಗ್ಗೆ ತಾವೇ ನಿರ್ಣಯ ಮಾಡಬೇಕಾಗುತ್ತದೆ, ಮತ್ತು ಇದನ್ನು ನಿಲ್ಲಿಸಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ :- ಮಾನ್ಯ ಉಪಾಧ್ಯಕ್ಷರೆ, ಅದೆಲ್ಲಾ ಸ್ಕ್ಯಾಂಡ್ಲನ್ ಆಗಿ ಬರುವಾಗ ಎಷ್ಟು ವರ್ಷವಾಗುತ್ತದೋ ಗೊತ್ತಿಲ್ಲ. ಏಕೆಂದರೆ, ಕೇಂದ್ರಕ್ಕೆ 50 ಕೋಟಿ ರೂ. ಪ್ರಸ್ತಾವನೆಯನ್ನು ಮಾನ್ಯ ಮಂತ್ರಿಗಳು ಕಳುಹಿಸಿದ್ದೇನೆಂದು ಕೊಟ್ಟಿರುವ ಹೇಳಿಕೆಯನ್ನು ಪತ್ರಿಕೆಯಲ್ಲಿ ನೋಡಿದೆ. ಈ ಹಿಂದೆ ಕಳುಹಿಸಿದ 10 ಕೋಟಿ ರೂ. ಪ್ರಸ್ತಾವನೆಯೇ ವಾಪಸ್ ಬಂದು ಆಗಿದೆ. ಅಲ್ಲಿ ಪ್ಲಾನ್‌ನಲ್ಲಿ ದುಡ್ಡಿಲ್ಲ. ಮುಂದಿನ ಅವಧಿಯಲ್ಲಿ ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ, ಕೇಂದ್ರದಿಂದ ಬರುತ್ತದೋ ಅಥವಾ ಫ್ರೆಂಚ್ ಟೆಕ್ನಾಲಜಿಯಿಂದ ಮಾಡುತ್ತೀರೋ ಗೊತ್ತಿಲ್ಲ. ಇವತ್ತು ಮಳೆ ಬರುವ ಮುಂಚೆ ವಲ್ನರಬರ್ ಪಾಯಿಂಟ್ಸ್ ಎಲ್ಲೆಲ್ಲಿದೆ ಅದನ್ನು ಗುರುತು ಮಾಡಿ ರಾಜ್ಯಸರ್ಕಾರದಿಂದ ನೀವೇನಾದರೂ ಸ್ವಲ್ಪ ಹಣ ಕೊಡುವುದಿದ್ದರೆ ಮಾಡಿ. ಕೇಂದ್ರಕ್ಕೆ, ಫ್ರಾನ್ಸ್‌ಗೆ ಕೈ ತೋರಿಸಿದರೆ, ಈ ಬಾರಿ ಕೊರತೆ ಜಾಸ್ತಿಯಾಗುತ್ತಾ ಹೋಗುತ್ತದೆ. ಕಳೆದ ಬಾರಿ ತಾವೇನು ಸ್ಯಾಂಡ್ ಬ್ಯಾಗ್ಸ್ ಹಾಕಿದಿರಿ, ಅದು ಕಲ್ಲು ಹಾಕುವುದಕ್ಕಿಂತ ಉತ್ತಮ ಎಂದು ಹೇಳಿದಿರಿ. ನಾನು ಅವತ್ತೇ ಬೇಡವೆಂದು ಹೇಳಿದೆ. ಬಹಳ ಹಠ ಮಾಡಿ ಅದನ್ನು ಹಾಕಿದರು. ಆದರೆ, ಕಲ್ಲು ಹಾಕಿದವರಿಗೆ ದುಡ್ಡು ಕೊಡಲಿಲ್ಲ. ಆದರೆ, ಇವತ್ತು ಅದು ಸರಿಯಲ್ಲ, ಕಲ್ಲು ಹಾಕುವುದು ಸರಿ ಎಂದು ಆಗಿದೆ. ಆದ್ದರಿಂದ ಯಾವುದು ಒಳ್ಳೆಯದು ಎಂಬುದರ ಬಗ್ಗೆ ಪುನರ್ ಪರಿಶೀಲನೆ ಮಾಡಿ. ಏಕೆಂದರೆ, ಸ್ಯಾಂಡ್ ಬ್ಯಾಗ್ಸ್ ಹಾಕಿದರೆ ಒಂದು ಬಿಸಿಲು, ಒಂದು ಮಳೆಗೆ ಅದು ಒಡೆದು ಹೋಗುತ್ತದೆ. ಅದು ನಿಲ್ಲುವುದಿಲ್ಲ. ಆದ್ದರಿಂದ, ಪುನಃ ಕಲ್ಲನ್ನು ಹಾಕಿಸತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಉಪಾಧ್ಯಕ್ಷರೆ, ಸಮುದ್ರ ಕೊರತೆ ಅಧ್ಯಯನ 1978 ರಲ್ಲಿ ಪ್ರಾರಂಭವಾಯಿತು. 1978 ರಿಂದ ಇವತ್ತಿನವರೆಗೆ ಬೇರೆ ಬೇರೆ ಕಡೆಗಳಲ್ಲಿ ಎಕ್ಸ್‌ಪೆರಿಮೆಂಟ್ ನಡೆಯುತ್ತಾ ಇದೆ. ಬೇರೆ ಬೇರೆ ಪ್ರದೇಶದಲ್ಲಿ ಯಾವರೀತಿಯ ಸಮುದ್ರ ಕೊರತೆ ಆಗುತ್ತದೆ, ಅದಕ್ಕೆ ಯಾವರೀತಿಯಲ್ಲಿ ತಡೆಗೋಡೆಯನ್ನು ಮಾಡಬೇಕೆಂದು ಅಧ್ಯಯನ 1978 ರಿಂದ ಪ್ರಾರಂಭವಾಗಿದೆ. ಇವತ್ತಿನ ವರೆಗೆ ನಾವು ಅಧ್ಯಯನದಲ್ಲೇ ಇದ್ದೇವೆ. ನಾನು ಬಹಳ ಬೇಸರದಿಂದ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಾನು ಈ ಖಾತೆಯನ್ನು ವಹಿಸಿದ ನಂತರ 136 ಕೋಟಿ ರೂಪಾಯಿಗಳ ಯೋಜನೆಯನ್ನು ರಾಜ್ಯಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ತೋರಿಸಿ, ಮಾನ್ಯ ಮುಖ್ಯಮಂತ್ರಿಗಳೇ ಈ ದೇಶದ ಪ್ರಧಾನ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಆ 136 ಕೋಟಿ ರೂಪಾಯಿಗಳ ಯೋಜನೆ ಮೂರು ಜಿಲ್ಲೆಗಳಲ್ಲಿ ಸಮಗ್ರವಾಗಿ ತಡೆಗೋಡೆಯನ್ನು ನಿರ್ಮಾಣ ಮಾಡುವಂಥ ಪ್ರಾಜೆಕ್ಟನ್ನು ಕೊಟ್ಟಿದ್ದೇವೆ. ನಾನು, ಕೇಂದ್ರ ಸಚಿವರ ಜೊತೆ ಚರ್ಚೆ ಮಾಡಿದಾಗ, ಅವರು ಹೇಳಿದರು. ಪ್ರತಿ ವರ್ಷ ನಿಮಗೆ 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಅದನ್ನು ಉಪಯೋಗಿಸಿಕೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರ ಸಮಗ್ರವಾದ ಸಮುದ್ರ ದಂಡೆಯನ್ನು ಮಾಡಲಿಕ್ಕೆ ನೀವು ಕಾರ್ಯಕ್ರಮ ರೂಪಿಸಬೇಕೆಂದು ಹೇಳಿದ್ದಾರೆ. ಈ ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿ ಇದೆ. ರಾಜ್ಯಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾನು ಈಗಾಗಲೇ ಚರ್ಚೆ ಮಾಡಿದ್ದೇನೆ. ಖಂಡಿತವಾಗಿಯೂ ಈ ಪ್ರಾಜೆಕ್ಟ್ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಮಾಡಲಿಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಉಳ್ಳಾಲದ ಮಟ್ಟಿಗೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಿರ್ಧಾರ ಮಾಡಿದ್ದೇವೆ. ಫ್ರೆಂಚ್ ಟೆಕ್ನಾಲಜಿಯಲ್ಲಿ ಒಂದೂವರೆ ಕಿಲೋಮೀಟರನ್ನು 4 ಕೋಟಿ 210 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಲಿಕ್ಕೆ ನಿರ್ಧಾರ ಮಾಡಿದ್ದೇವೆ. ರಾಜ್ಯಸರ್ಕಾರ ಮೂರನೇ ಎರಡು ಭಾಗ ಮತ್ತು ಫ್ರೆಂಚ್ ಗವರ್ನಮೆಂಟಿನವರು ಮೂರನೇ ಒಂದು ಭಾಗ ಕೊಡಲಿಕ್ಕೆ ಈಗಾಗಲೇ ಒಪ್ಪಂದ ಆಗಿದೆ. ಅದನ್ನು ನಾವು ಈ ಸಲ ಮಾಡಿಕೊಡುತ್ತೇವೆ.

ಶ್ರೀ ಯು.ಟಿ. ಫರೀದ್ :- ಹಾಗಾದರೆ, ತಾವು ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ. ಯಾವ ಡೇಟಿಗೆ ಕೆಲಸ ಪ್ರಾರಂಭ ಮಾಡುತ್ತೇವೆಂಬುದನ್ನು ಹೇಳಿ.

ಶ್ರೀ ವಸಂತವಿ. ಸಾಲಿಯಾನ :- ನಾನು ಮಾನ್ಯ ಕರಾವಳಿಯ ಎಲ್ಲಾ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮತ್ತು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಆದಷ್ಟು ಬೇಗ ಏಕೆಂದರೆ ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚೆ ನಾವು ಇದನ್ನು ಪ್ರಾರಂಭ ಮಾಡಬೇಕಾಗಿದೆ. ಅದರ ಬಗ್ಗೆ ಅಧ್ಯಯನ ಇವತ್ತು ನಡೆಯುತ್ತಾ ಇದೆ. ಖಂಡಿತವಾಗಿಯೂ ಇದರ ಬಗ್ಗೆ ನಾನು ಚಿಂತನೆ ಮಾಡುತ್ತೇನೆ.

ಉಪಾಧ್ಯಕ್ಷರು :- ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳಿಸಲಾಗುವುದು.

(ಸದನವು ಮಧ್ಯಾಹ್ನ 2 ಗಂಟೆ 56 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ತಾ: 17ನೇ ಮಾರ್ಚ್ ಮಾಹೆ 2003ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)

+ ಈ ಚಿಹ್ನೆಯನ್ನು ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.